ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**Dr. Shalini Rajneesh, I.A.S.,**
Principal Secretary to Government
Backward Classes Welfare Department

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ: 203, 2ನೇ ಮಹಡಿ
ವಿಕಾಸ ಸೌಧ, ಬೆಂಗಳೂರು – 560 001

Karnataka Government Secretariat
Room No. 203, 2nd Floor
Vikasa Soudha, Bengaluru - 560 001
Off : (080) 2203 4499, 2225 2163
Fax No.: (080) 2225 5171
E-mail : prsecy-bcw@karnataka.gov.in

---

ಅ.ಸ.ಪ ಸಂಖ್ಯೆ ದೇಹಿನಿ.ಸ. ಅರಿವು ಸಿಆರ್–07/14–15 30/10/2014

ಮಾನ್ಯರೆ,

**ವಿಷಯ** : ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ. 2ರ ಬಡ್ಡಿದರದಲ್ಲಿ ಗರಿಷ್ಠ ರೂ. 1.00 ಲಕ್ಷಗಳ ಶೈಕ್ಷಣಿಕ ಸಾಲ ನೀಡುವ ಕುರಿತು ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ಯೋಜನೆ ಸೌಲಭ್ಯ ಪಡೆಯಲು ಮಾಹಿತಿ ನೀಡಲು ಕೋರಿ.

**ಉಲ್ಲೇಖ** :
1. ಸರ್ಕಾರದ ಆದೇಶ ಸಂಖ್ಯೆ ಹಿಂವಕ/507/ಬಿಎಂಎಸ್/2013 ದಿನಾಂಕ: 31/08/2013.
2. ಮೇಲ್ಕಂಡ ಯೋಜನೆಯಲ್ಲಿ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ನೀಡಿರುವ ಪ್ರಕಟಣೆ ಪತ್ರದ ಸಂಖ್ಯೆ ದೇಹಿನಿ/ಸಅಅ/ಸಿಆರ್–4/2014–15 ದಿನಾಂಕ 02/06/2014

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಉಲ್ಲೇಖ(1)ರ ಸರ್ಕಾರ ಆದೇಶದನ್ವಯ ಪ್ರವರ್ಗ 1,2ಎ, 3ಎ ಮತ್ತು 3ಬಿ ಗಳಿಗೆ ಸೇರಿದ ಹಾಗೂ ಕುಟುಂಬದವರ ವಾರ್ಷಿಕ ಆದಾಯ ಗರಿಷ್ಠ ರೂ.3.50 ಲಕ್ಷದವರೆಗೆ ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ಸಿಇಟಿ ಮೂಲಕ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದು ವ್ಯಾಸಂಗ ಮಾಡಲು ವಾರ್ಷಿಕ ಶೇಕಡ 2%ರ ಬಡ್ಡಿದರದಲ್ಲಿ ವಾರ್ಷಿಕ ಗರಿಷ್ಠ ರೂ.1.00 ಲಕ್ಷಗಳ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವೃತ್ತಿಪರ, ವೈದ್ಯಕೀಯ ತಾಂತ್ರಿಕ ಇತ್ಯಾದಿ ಸರ್ಕಾರದ ಆದೇಶದಲ್ಲಿ ಗುರುತಿಸಿರುವ ಉನ್ನತ ಕೋರ್ಸ್‌ಗಳ ವ್ಯಾಸಂಗ ಮುಂದುವರೆಸಲು ಪ್ರವೇಶ ಪರೀಕ್ಷಾ ಪ್ರಾಧಿಕಾರದಿಂದ (ಸಿಇಟಿ) ಸೀಟು ಪಡೆದು ಕಾಲೇಜುಗಳಿಗೆ ಸೇರ್ಪಡೆಯಾದವರಿಗೆ ವ್ಯಾಸಂಗ ಮುಂದುವರೆಸಲು ಅಗತ್ಯವಿರುವ ಹಣವನ್ನು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಯೋಜನೆಯಲ್ಲಿ ಸೌಲಭ್ಯ ಪಡೆಯಲು ಬೇಕಾದ ಅರ್ಹತೆ, ಸಾಲದ ಉದ್ದೇಶ, ಬಡ್ಡಿದರ, ಸಾಲ ಮಂಜೂರು ಮಾಡುವ ಕೋರ್ಸ್‌ಗಳ ವಿವರ ಹಾಗೂ ಅರ್ಜಿಯ ಜೊತೆ ಸಲ್ಲಿಸಬೇಕಾದ ಪ್ರಾಥಮಿಕ ದಾಖಲೆಗಳ ವಿವರಗಳನ್ನು ಹೊಂದಿರುವ ಉಲ್ಲೇಖ(1)ರ ಸರ್ಕಾರ ಆದೇಶ ಪತ್ರವನ್ನು ನಿಮ್ಮ ಮಾಹಿತಿಗಾಗಿ ಈ ಪತ್ರಕ್ಕೆ ಲಗತ್ತಿಸಿದೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಈ ಯೋಜನೆಯು ಸೇರಿದಂತೆ ವಿವಿಧ ಯೋಜನೆಗಳಲ್ಲಿ 2014–15ನೇ ಸಾಲಿನಲ್ಲಿ ಸೌಲಭ್ಯ ಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 02/06/2014ರಲ್ಲಿ ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಿ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಳೀಯ ಪತ್ರಗಳಲ್ಲಿ, ತಾಲ್ಲೂಕು ಪಂಚಾಯತ್ ಕಛೇರಿಗಳ ಹಾಗೂ ಗ್ರಾಮ ಪಂಚಾಯತ್ ಕಛೇರಿಗಳಲ್ಲಿ ಪ್ರಕಟಿಸಲಾಗಿದೆ. ನಿಗಮದ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯಲ್ಲಿರುವ ತಾಂತ್ರಿಕ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಭೇಟಿ ನೀಡಿ ಮಾಹಿತಿ ನೀಡಿ, ಕಾಲೇಜಿನ ಸೂಚನಾ ಫಲಕದಲ್ಲಿ ಮಾಹಿತಿಯನ್ನು ಪ್ರಕಟಿಸಲು ಕ್ರಮ ಕೈಗೊಂಡಿರುತ್ತಾರೆ.

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**Dr. Shalini Rajneesh, I.A.S.,**
Principal Secretary to Government
Backward Classes Welfare Department

ಕರ್ನಾಟಕ ಸರ್ಕಾರ ಸಚಿವಾಲಯ
ಕೊಠಡಿ ಸಂಖ್ಯೆ: 203, 2ನೇ ಮಹಡಿ
ವಿಕಾಸ ಸೌಧ, ಬೆಂಗಳೂರು – 560 001

Karnataka Government Secretariat
Room No. 203, 2nd Floor
Vikasa Soudha, Bengaluru - 560 001
Off: (080) 2203 4499, 2225 2163
Fax No.: (080) 2225 5171
E-mail: prsecy-bcw@karnataka.gov.in



ದಿನಾಂಕ 20/09/2014ರಂದು ನಡೆದ ರಾಜ್ಯಮಟ್ಟದ ನಿಗಮದ ಎಲ್ಲಾ ಜಿಲ್ಲಾ ವ್ಯವಸ್ಥಾಪಕರವರ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಯೋಜನಾವಾರು ಸ್ವೀಕೃತವಾದ ಅರ್ಜಿಗಳ ಅಂಕಿ ಅಂಶಗಳನ್ನು ಪರಿಶೀಲಿಸಿಲಾಗಿ ಅರಿವು ಯೋಜನೆಯಲ್ಲಿ ಕೆಲವು ಜಿಲ್ಲೆಗಳಲ್ಲಿ ನಿಗದಿತ ಗುರಿಗಿಂತ ಕಡಿಮೆ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಕಡಿಮೆ ಅರ್ಜಿ ಸ್ವಿಕೃತಗೊಂಡಿರುವ ಜಿಲ್ಲೆಗಳ ಪಟ್ಟಿಯನ್ನು ಸಹ ಈ ಪತ್ರದೊಂದಿಗೆ ಅನುಬಂಧದಲ್ಲಿ ಲಗತ್ತಿಸಿದೆ. ಆದರಿಂದ, ನಿಮ್ಮ ವ್ಯಾಪ್ತಿಗೆ ಬರುವ ಕಾಲೇಜುಗಳಲ್ಲಿ (ಕಡಿಮೆ ಅರ್ಜಿ ಸ್ವೀಕೃತಗೊಂಡಿರುವ ಜಿಲ್ಲೆಗಳಲ್ಲಿ ಸಂಬಂಧಿಸಿದ ವೈದ್ಯಕೀಯ/ತಾಂತ್ರಿಕ ವಿದ್ಯಾಲಯ/ಕಾಲೇಜುಗಳ ಪ್ರಾಂಶುಪಾಲರು ಹಾಗೂ ಅಧೀಕ್ಷಿತಾಧಿಕಾರಿಗಳಿಗೆ ಮಾತ್ರ) ಈ ಯೋಜನೆಯ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ, ಅರ್ಹ ಮತ್ತು ಆಸಕ್ತ ಬಡ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಈ ಯೋಜನೆಯ ಸೌಲಭ್ಯ ಪಡೆದುಕೊಳ್ಳುವಂತೆ ಸೂಕ್ತವಾಗಿ ಸಲಹೆ ನೀಡಲು/ಸೂಚನೆಗಳನ್ನು ಹೊರಡಿಸಲು ಈ ಮೂಲಕ ಕೋರಿದೆ. ನಿಗದಿತ ಅರ್ಜಿ ನಮೂನೆಗಳು ಸಂಬಂದಿಸಿದ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯಲ್ಲಿ ಲಭ್ಯವಿರುತ್ತದೆ ಹಾಗೂ ಅಗತ್ಯ ಮಾಹಿತಿಯನ್ನು ನೀಡುತ್ತಾರೆ.

ಆದ್ದರಿಂದ, ಈ ನಿಟ್ಟಿನಲ್ಲಿ ತಾವು ಸೂಕ್ತವಾಗಿ ಸಕರಾತ್ಮಕ ಕ್ರಮಗಳನ್ನು ಕೈಗೊಳ್ಳಲು ಕೋರುತ್ತೇನೆ.

ತಮ್ಮ ವಿಶ್ವಾಸಿ

ಗೆ,

**ಶ್ರೀ ಹೆಚ್.ಯು.ತಳವಾರ್,**
ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-01.

ಕರ್ನಾಟಕ ಸರ್ಕಾರ

ಸಂ.ಡಿಟಿಇ/04/ಎಸ್‌ಸಿಹೆಚ್(1)/2014-15(ಭಾ-3)
ಅಡಕ : ಉಲ್ಲೇಖ(1) (2)ರ ಸರ್ಕಾರಿ ಆದೇಶ ಪತ್ರ ಲಗತ್ತಿಸಿದೆ.

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560001.
ದಿನಾಂಕ: 10-11-2014.

-:: ಹಿಂಬರಹ ::-

ವಿಷಯ :- ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ. 2ರ ಬಡ್ಡಿದರದಲ್ಲಿ ಗರಿಷ್ಠ ರೂ.1.00 ಲಕ್ಷಗಳ ಶೈಕ್ಷಣಿಕ ಸಾಲ ನೀಡುವ ಕುರಿತು ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ಯೋಜನೆ ಸೌಲಭ್ಯ ಪಡೆಯಲು ಮಾಹಿತಿ ನೀಡಲು ಕೋರಿ.

ಉಲ್ಲೇಖ :- 1. ಸರ್ಕಾರದ ಆದೇಶ ಸಂಖ್ಯೆ: ಹಿಂವಇ/507/ಬಿಎಂಎಸ್ 2013, ದಿ: 31/08/2013.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಅ.ಸ.ಪ ಸಂಖ್ಯೆ: ದೇಹಿನಿ.ಸ. ಅರಿವು ಸಿಆರ್-07/14-15 ದಿನಾಂಕ: 30-10-2014.

-000000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಉಲ್ಲೇಖ(1)ರ ಸರ್ಕಾರ ಆದೇಶದನ್ವಯ **ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ಗಳಿಗೆ ಸೇರಿದ ಹಾಗೂ ಕುಟುಂಬದ ವಾರ್ಷಿಕ ಆದಾಯ ಗರಿಷ್ಠ ರೂ. 3.50 ಲಕ್ಷದವರೆಗೆ (ಮೂರು ಲಕ್ಷದ ಐವತ್ತು ಸಾವಿಗಳು ಮಾತ್ರ) ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಇಂಜನಿಯರಿಂಗ್, ವೃತ್ತಿಪರ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ವಾರ್ಷಿಕ ಶೇ.2 ರ ಬಡ್ಡಿದರದಲ್ಲಿ ವಾರ್ಷಿಕ ಗರಿಷ್ಠ ರೂ. 1.00 ಲಕ್ಷಗಳ ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.**

ಪುಟದ ಹಿಂಭಾಗದಲ್ಲಿರುವ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರ ಅರೇ ಸರ್ಕಾರಿ ಪತ್ರದಲ್ಲಿ ತಿಳಿಸಿರುವ ಅಂಶದ ಪ್ರಕಾರ ತಾಂತ್ರಿಕ ಶಿಕ್ಷಣ ಇಲಾಖೆಯ ಅಧಿನಕ್ಕೊಳಪಡುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಇಂಜನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರಿಗೆ **ಅರಿವು ಶೈಕ್ಷಣಿಕ ಸಾಲ ಯೋಜನೆಯ** ಸೌಲಭ್ಯ ಪಡೆಯಲು ಬೇಕಾದ ಅರ್ಹತೆ, ಸಾಲದ ಉದ್ದೇಶ, ಬಡ್ಡಿದರ, ಸಾಲ ಮಂಜೂರು ಮಾಡುವ ಕೋರ್ಸುಗಳ ವಿವರ ಹಾಗೂ ಅರ್ಜಿಯ ಜೊತೆ ಸಲ್ಲಿಸಬೇಕಾದ ಪ್ರಾಥಮಿಕ ದಾಖಲೆಗಳ ವಿವರಗಳನ್ನು ಹೊಂದಿರುವ ಉಲ್ಲೇಖ(1)ರ ಸರ್ಕಾರಿ ಪತ್ರವನ್ನು ಇದರೊಂದಿಗೆ ಲಗತ್ತಿಸಲಾಗಿದ್ದು, ನಿಗಧಿತ ಅರ್ಜಿ ನಮೂನೆಗಳನ್ನು ಸಂಬಂಧಿಸಿದ ಜಿಲ್ಲೆಗಳ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳಲ್ಲಿ ಲಭ್ಯವಿರುತ್ತದೆ ಹಾಗೂ ಇವರು ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡುತಾರೆ. ಆದ್ದರಿಂದ ಸಿ.ಇ.ಟಿ ಮೂಲಕ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆದಿರುವ/ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಗಮನಕ್ಕೆ ತರುವ ಉದ್ದೇಶದಿಂದ ಈ ಆದೇಶವನ್ನು ತಮ್ಮ ಸಂಸ್ಥೆಯ ನಾಮ ಫಲಕದಲ್ಲಿ ಹಾಗೂ ತರಗತಿಗಳಿಗೆ ವಿಭಾಗದ ಮುಖ್ಯಸ್ಥರಿಂದ ತಲುಪಿಸುವ ವ್ಯವಸ್ಥೆಯನ್ನು ಚಾಚೂತಪ್ಪದೇ ಮಾಡಬೇಕೆಂದು ಈ ಮೂಲಕ ಸೂಚಿಸಿದೆ.

ನಿರ್ದೇಶಕರು

ಗೆ,

1. **ಪ್ರಾಂಶುಪಾಲರು,** ರಾಜ್ಯಯ ಎಲ್ಲಾ ಸರ್ಕಾರಿ ಅನುದಾನಿತ/ಅನುರಾಹಿತ ಇಂಜನಿಯರಿಂಗ್ ಕಾಲೇಜುಗಳಿಗೆ – ಇದರ ಬಗ್ಗೆ ಖುದ್ದಾಗಿ ಗಮನ ಹರಿಸಿ ವಿದ್ಯಾರ್ಥಿಗಳಿಗೆ ಯೋಜನೆಯ ಸೌಲಭ್ಯವನ್ನು ಪಡೆಯುವಲ್ಲಿ ಬಾಜನರಾಗಬೇಕೆಂದು ಈ ಮೂಲಕ ತಿಳಿಸಿದೆ.
2. **ಸಂಯೋಜನಾಧಿಕಾರಿಗಳು,** ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು.

## ಕರ್ನಾಟಕ ಸರ್ಕಾರದ ನಡವಳಿ

ವಿಷಯ : ಅರಿವು-ಶೈಕ್ಷಣಿಕ ಸಾಲ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಗರಿಷ್ಠ ರೂ.1.00ಲಕ್ಷಗಳ ಶೈಕ್ಷಣಿಕ ಸಾಲ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಪತ್ರ ಸಂಖ್ಯೆ: ದೇಹಿನಿ/ಸಮನ್ವಯ/ಘ.ವೆ./ಸಿಆರ್-7A/2013-14, ದಿನಾಂಕ:06/08/2013.

* * *

### ಪ್ರಸ್ತಾವನೆ:

2013-14ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 283ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು-ಶೈಕ್ಷಣಿಕ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ನೀಡಲಾಗುತ್ತಿರುವ ಸಾಲದ ಮೊತ್ತ ರೂ.1,00,000/-ಗಳಿಗೆ ಹೆಚ್ಚಿಸಲು ಘೋಷಿಸಲಾಗಿದೆ.

ಅದರಂತೆ ಸದರಿ ಘೋಷಣೆಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಸಲ್ಲಿಸಿರುವ ಪ್ರಸ್ತಾವನೆಯಂತೆ ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು-ಶೈಕ್ಷಣಿಕ ಸಾಲ ಯೋಜನೆಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಸಾಲದ ಮೊತ್ತ ಗರಿಷ್ಠ ರೂ.1,00,000/-ಗಳು ಅಥವ ವಾಸ್ತವಿಕ ವೆಚ್ಚವನ್ನು ಮಂಜೂರು ಮಾಡಲು ಹಾಗೂ ಅರಿವು-ಶೈಕ್ಷಣಿಕ ಸಾಲ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಆದೇಶ.

### ಸರ್ಕಾರದ ಆದೇಶ ಸಂಖ್ಯೆ: ಹಿಂವಕ 507 ಬಿಎಂಎಸ್ 2013, ಬೆಂಗಳೂರು, ದಿ:31-08-2013

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು-ಶೈಕ್ಷಣಿಕ ಸಾಲ ಯೋಜನೆಯಡಿ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಇತ್ಯಾದಿ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಎಲ್ಲಾ ಪ್ರವರ್ಗಗಳ ವಿದ್ಯಾರ್ಥಿಗಳಿಗೆ ಅನುಬಂಧದಲ್ಲಿರುವಂತೆ ಅರಿವು-ಶೈಕ್ಷಣಿಕ ಸಾಲ ಯೋಜನೆ ಪರಿಷ್ಕೃತ ಮಾರ್ಗಸೂಚಿಗಳನ್ನು ಅನುಸರಿಸುವ ಷರತ್ತಿಗೊಳಪಟ್ಟು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ಗರಿಷ್ಠ ರೂ.1,00,000/-ಗಳು ಅಥವಾ ವಾಸ್ತವಿಕ ವೆಚ್ಚಕ್ಕೆ ಅನುಗುಣವಾಗಿ ಸಾಲವನ್ನು ಮಂಜೂರಾತಿ ಮಾಡಲು ಆದೇಶಿಸಿದೆ.

..2...

ಇದಕ್ಕೆ ತಗಲುವ ವೆಚ್ಚವನ್ನು 2013-14ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 4225-03-190-0-01(ಯೋಜನೆ)ರಡಿಯಲ್ಲಿ ನಿಗಮಕ್ಕೆ ಒದಗಿಸಿರುವ ಅನುದಾನದಿಂದಲೇ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 623 ವೆಚ್ಚ-3/13, ದಿನಾಂಕ:31.08.2013 ಮತ್ತು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಪಿಡಿ 50 ಏಎಂಎಂ 2013, ದಿನಾಂಕ:31.08.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ದಿನಾಂಕ:31-08-2013 ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಏಕ ಗವಾಕ್ಷಿ ಸಭೆಯಲ್ಲಿ ಮೇಲಿನ ಯೋಜನೆಗೆ ಸಹಮತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ), ವಿಧಾನಸೌಧ, ಬೆಂಗಳೂರು
5. ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ನಿಯಮಿತ, ಬೆಂಗಳೂರು.
6. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ ಇವರ ಆಪ್ತಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿ ಇವರ ಆಪ್ತ ಸಹಾಯಕರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3&9), ವಿಧಾನಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

# ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ), ಬೆಂಗಳೂರು

2014-15ನೇ ಸಾಲಿನಲ್ಲಿ ನಿಗಮದ ಅರಿವು ಯೋಜನೆಗಳಲ್ಲಿ ಸ್ವೀಕರಿಸಿದ ಅರ್ಜಿಗಳ ಯೋಜನಾವಾರು ವಿವರ

ಅನುಬಂಧ

ದಿನಾಂಕ:23/10/2014 ರವರೆಗೆ

| ಕ್ರ.ಸಂ | ಜಿಲ್ಲೆಗಳ ಹೆಸರು | ನಿಗದಿಪಡಿಸಿದ ಗುರಿ | ಸ್ವೀಕರಿಸಿದ ಅರ್ಜಿಗಳ |
|---|---|---|---|
| 1 | ಬೆಂಗಳೂರು(ನ) | 196 | 133 |
| 2 | ಬೆಂಗಳೂರು(ಗ್ರಾ) | 28 | 23 |
| 3 | ಶಿವಮೊಗ್ಗ | 49 | 27 |
| 4 | ತುಮಕೂರು | 77 | 126 |
| 5 | ಚಿತ್ರದುರ್ಗ | 42 | 68 |
| 6 | ಕೋಲಾರ | 42 | 11 |
| 7 | ದಾವಣಗೆರೆ | 56 | 55 |
| 8 | ರಾಮನಗರ | 28 | 25 |
| 9 | ಚಿಕ್ಕಬಳ್ಳಾಪುರ | 35 | 23 |
| 10 | ಮೈಸೂರು | 77 | 63 |
| 11 | ಮಂಡ್ಯ | 49 | 37 |
| 12 | ಚಾ.ನಗರ | 28 | 28 |
| 13 | ಉಡುಪಿ | 35 | 33 |
| 14 | ಹಾಸನ | 49 | 20 |
| 15 | ಚಿಕ್ಕಮಗಳೂರು | 35 | 20 |
| 16 | ದಕ್ಷಿಣಕನ್ನಡ | 56 | 59 |
| 17 | ಕೊಡಗು | 14 | 4 |
| 18 | ಬೆಳಗಾವಿ | 126 | 185 |
| 19 | ಹಾವೇರಿ | 42 | 28 |
| 20 | ಗದಗ | 28 | 51 |
| 21 | ಬಿಜಾಪುರ | 56 | 62 |
| 22 | ಬಾ.ಕೋಟೆ | 49 | 46 |
| 23 | ಧಾರವಾಡ | 56 | 38 |
| 24 | ಉ.ಕನ್ನಡ | 42 | 14 |
| 25 | ಗುಲ್ಬರ್ಗಾ | 72 | 34 |
| 26 | ಬಳ್ಳಾರಿ | 72 | 60 |
| 27 | ಬೀದರ್ | 48 | 39 |
| 28 | ರಾಯಚೂರು | 56 | 31 |
| 29 | ಕೊಪ್ಪಳ | 40 | 32 |
| 30 | ಯಾದಗಿರಿ | 32 | 17 |
| | ಎಲ್ಲಾ ಒಟ್ಟು | **1615** | **1392** |

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ:ಹಿಂವಕ 507 ಬಿಎಂಎಸ್ 2013, ದಿನಾಂಕ:31-08-2013

ಅರಿವು-ಶೈಕ್ಷಣಿಕ ಸಾಲ ಯೋಜನೆಯ ಮಾರ್ಗಸೂಚಿಗಳು
ಮತ್ತು ಅನುಷ್ಠಾನದಲ್ಲಿ ಅನುಸರಿಸಬೇಕಾದ ವಿಧಾನಗಳು.

* * *

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವೃತ್ತಿಪರ, ತಾಂತ್ರಿಕ, ವೈದ್ಯಕೀಯ ಇತ್ಯಾದಿ ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಪ್ರವೇಶ ಪರೀಕ್ಷಾ ಪ್ರಾಧಿಕಾರದಿಂದ (ಸಿ.ಇ.ಟಿ) ಸೀಟು ಪಡೆದು ಕಾಲೇಜಿಗೆ ಸೇರ್ಪಡೆಯಾದವರಿಗೆ ವ್ಯಾಸಂಗ ಮುಂದುವರೆಸಲು ಅಗತ್ಯವಿರುವ ಹಣವನ್ನು ರಿಯಾಯಿತಿ ಬಡ್ಡಿದರದಲ್ಲಿ ಸಾಲ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

I. ಅರ್ಹತೆ.

1. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು ಮತ್ತು ರಾಜ್ಯ ಸರ್ಕಾರವು ಅಂಗೀಕರಿಸಿ ಅಧಿಸೂಚಿಸಿರುವ ಹಿಂದುಳಿದ ವರ್ಗಗಳಿಗೆ ಅಂದರೆ, ಪ್ರವರ್ಗ-I, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ & ಅದರ ಉಪಜಾತಿಗಳು, ಸಿಖ್ಖರು, ಬೌದ್ಧರು, ಜೈನರು, ಕ್ರೈಸ್ತರು ಮತ್ತು ಮತಾಂತರ ಹೊಂದಿದ ಕ್ರೈಸ್ತರು, ಆಂಗ್ಲೋ ಇಂಡಿಯನ್ಸ್, ಪಾರ್ಸಿಯವರನ್ನು ಹೊರತುಪಡಿಸಿದೆ) ವಿದ್ಯಾರ್ಥಿಯ ವಯಸ್ಸು 30 ವರ್ಷ ಮೀರಿರಬಾರದು.
2. ವಿದ್ಯಾರ್ಥಿ ಮತ್ತು ಅವರ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳನ್ನು ಮೀರಿರಬಾರದು.
3. ವಿದ್ಯಾರ್ಥಿಯು ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು.
4. ವಿದ್ಯಾರ್ಥಿಯು ಶೈಕ್ಷಣಿಕ ಉದ್ದೇಶಕ್ಕೆ ಇತರ ಯಾವುದೇ ಬ್ಯಾಂಕ್/ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿರಬಾರದು.

II. ಸಾಲದ ಉದ್ದೇಶ ಮತ್ತು ಬಡ್ಡಿದರ:

ಈ ಮುಂದಿನ ವೆಚ್ಚಗಳಿಗೆ ಒಳಪಟ್ಟು ವಾರ್ಷಿಕ ಗರಿಷ್ಠ ರೂ.1,00,000/-ಗಳನ್ನು ಅಥವಾ ಉನ್ನತ ವ್ಯಾಸಂಗದ ವಾಸ್ತವಿಕ ಕೋರ್ಸ್ ವೆಚ್ಚದ (Actual Fee) ಮಿತಿಗೊಳಪಟ್ಟು ಸಾಲವನ್ನು ವಾರ್ಷಿಕ ಶೇ.2ರ ಬಡ್ಡಿ ದರದಲ್ಲಿ ಮಂಜೂರು ಮಾಡಲಾಗುವುದು.

1. ಪ್ರವೇಶ ಶುಲ್ಕ, ಬೋಧನಾ ವೆಚ್ಚ, ಲ್ಯಾಬೊರೇಟರಿ ಫೀ, ಪರೀಕ್ಷಾ ಶುಲ್ಕ ಹಾಗೂ ಸರ್ಕಾರವು ನಿಗದಿಪಡಿಸಿದ ಇತ್ಯಾದಿ ಫೀಜುಗಳು. (ಕಾಲೇಜ್ ಪ್ರಿನ್ಸಿಪಾಲರಿಂದ Fee Structure ಪ್ರತಿಯನ್ನು ಪಡೆದು ವಿದ್ಯಾರ್ಥಿಯು ಸಲ್ಲಿಸಬೇಕು.)
2. ಪುಸ್ತಕಗಳು, ಸ್ಟೇಷನರಿ ಮತ್ತು ಉಪಕರಣಗಳನ್ನು ಕೊಳ್ಳುವ ವೆಚ್ಚ. (ಅಂದಾಜು ವೆಚ್ಚದ ಪಟ್ಟಿಯನ್ನು ಸಲ್ಲಿಸಬೇಕು.)
3. ವ್ಯಾಸಂಗಕ್ಕೆ ಅವಶ್ಯಕತೆಗೆ ಅನುಗುಣವಾಗಿ ಕಾಲೇಜಿನವರು ನಿಗದಿಪಡಿಸಿರುವ ಪ್ರವಾಸದ ವೆಚ್ಚ.
4. ಹಾಸ್ಟೆಲ್ ಫೀ. (ವಾಸವಿರುವ ಹಾಸ್ಟೆಲ್ ವಾರ್ಡನ್‌ರವರಿಂದ ವಾರ್ಷಿಕ ಅಂದಾಜು ವೆಚ್ಚದ ಪಟ್ಟಿ (Estimate) ಪ್ರತಿ ಸಲ್ಲಿಸಬೇಕು.

ಶ್ಯಾಸ್ತ್ರೀ

III. ಸಾಲ ಮಂಜೂರು ಮಾಡುವ ಕೋರ್ಸ್‌ಗಳು:(Course Covered)

1. ವೈದ್ಯಕೀಯ (Medical):- (ಎಂ.ಸಿ.ಐ ನಿಂದ ಅಂಗೀಕೃತ ಮತ್ತು ರಾಜ್ಯದ ಯೂನಿವರ್ಸಿಟಿಗಳಿಗೆ ಅಫೀಲಿಯೇಟ್ ಆದ ಕಾಲೇಜ್‌ಗಳಲ್ಲಿ ಎಂಬಿಬಿಎಸ್ ಕೋರ್ಸ್‌ಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)

2. ದಂತವೈದ್ಯಕೀಯ (Dental):- (ಡಿ.ಸಿ.ಐ ನಿಂದ ಅಂಗೀಕೃತ ಮತ್ತು ರಾಜ್ಯದ ಯೂನಿವರ್ಸಿಟೀಸ್‌ಗಳಿಗೆ ಅಫೀಲಿಯೇಟ್ ಆದ ಕಾಲೇಜ್‌ಗಳಲ್ಲಿ ಬಿಡಿಎಸ್ ಕೋರ್ಸ್‌ಗೆ ಸಿಇಟಿ ಮೂಲಕ ಪ್ರವೇಶ ಪಡೆದವರು)

3. ಇಂಜಿನಿಯರಿಂಗ್/ಟೆಕ್ನಾಲಜಿ/ಆರ್ಕಿಟೆಕ್ಚರ್:-(ಎ.ಐ.ಸಿ.ಟಿ.ಇ ಯಿಂದ ಅಂಗೀಕೃತ ಮತ್ತು ಸರ್ಕಾರಿ ಕಾಲೇಜು/ಸರ್ಕಾರದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಬಿ.ಇ ಕೋರ್ಸ್‌ಗಳಿಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)

4. ಐ.ಎಸ್.ಎಂ ಮತ್ತು ಹೆಚ್:- (ಇಂಡಿಯನ್ ಸಿಸ್ಟಮ್ ಆಫ್ ಮೆಡಿಸಿನ್ ಮತ್ತು ಹೋಮಿಯೋಪತಿ) (ಸರ್ಕಾರದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಬಿಯುಎಂಎಸ್, ಬಿಎಎಂಎಸ್, ಬಿಹೆಚ್‌ಎಂಎಸ್ ಕೋರ್ಸ್‌ಗಳಿಗೆ ಸಿಇಟಿ ಮೂಲಕ ಪ್ರವೇಶ ಪಡೆದವರು.)

5. ವೃತ್ತಿಪರ ಕೋರ್ಸ್‌ಗಳಾದ ಕಂಪನಿ ಸೆಕ್ರೆಟರಿ, ಚಾರ್ಟರ್ಡ್ ಅಕೌಂಟೆಂಟ್ ಮತ್ತು ಕಾಸ್ಟ್ & ವರ್ಕ್ಸ್ ಅಕೌಂಟೆಂಟ್:- (ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ/ ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಡ್ ವರ್ಕ್ಸ್ ಅಕೌಂಟೆಂಟ್ಸ್/ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಸಂಸ್ಥೆಗಳಲ್ಲಿ ರಿಜಿಸ್ಟ್ರೇಷನ್ ಮತ್ತು ಈ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದವರು.)

6. ಎಂ.ಸಿ.ಎ., ಎಲ್.ಎಲ್.ಎಂ., ಎಂ.ಫಾರ್ಮ, ಎಂ.ಡಿ., ಎಂ.ಇ., ಎಂ.ಟೆಕ್., ಎಂ.ಬಿ.ಎ., ಪಿ.ಹೆಚ್.ಡಿ ಇತ್ಯಾದಿ ಉನ್ನತ ವ್ಯಾಸಂಗದ ಕೋರ್ಸ್‌ಗಳು:-(ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಸಿಇಟಿ ಅಥವಾ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆದವರು.)

7. ಬಿ.ಎಸ್.ಸಿ ಪ್ಯಾರಾ ಮೆಡಿಕಲ್ & ಬಿ.ಎಸ್.ಸಿ. ಬಯೋಟೆಕ್:- (ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜ್‌ಗಳಲ್ಲಿ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆದವರು)

8. ಕೋರ್ಸ್‌ಗಳ ಪಟ್ಟಿಯನ್ನು ಲಗತ್ತಿಸಿದೆ.

IV. ಸಾಲ ಪಡೆಯಲು ಅರ್ಜಿ ಮತ್ತು ಸಲ್ಲಿಸಬೇಕಾದ ಪ್ರಾಥಮಿಕ ದಾಖಲಾತಿಗಳು:-

ಸಾಲ ಪಡೆಯ ಬಯಸುವ ವಿದ್ಯಾರ್ಥಿಗಳು ನಿಗಮವು ನಿಗದಿಪಡಿಸಿದ ಅರ್ಜಿ ನಮೂನೆಯನ್ನು ವಿದ್ಯಾರ್ಥಿಗಳು ವಾಸಿಸುತ್ತಿರುವ ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಯಿಂದ ಪಡೆದುಕೊಳ್ಳಬೇಕು. ಅರ್ಜಿಯಲ್ಲಿ ಪೂರ್ಣ ಮಾಹಿತಿಯನ್ನು ಭರ್ತಿಮಾಡಿ, ಭರ್ತಿಮಾಡಿದ ಅರ್ಜಿಯನ್ನು ಈ ಕೆಳಕಂಡ ದಾಖಲಾತಿಗಳೊಂದಿಗೆ ವಿದ್ಯಾರ್ಥಿಗಳು ವಾಸಿಸುತ್ತಿರುವ ಆಯಾ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರು ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು.

1. ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಪೂರ್ಣವಾಗಿ ಭರ್ತಿಮಾಡಬೇಕು. ಅಪೂರ್ಣ ಮಾಹಿತಿಯುಳ್ಳ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಹಿಂದುಳಿದ ವರ್ಗಕ್ಕೆ ಸೇರಿರುವ ಬಗ್ಗೆ ಸಂಬಂಧಿಸಿದ ಪ್ರಾಧಿಕಾರದಿಂದ (ತಹಶೀಲ್ದಾರ್) ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಸಲ್ಲಿಸಬೇಕು.
3. ವಿದ್ಯಾರ್ಥಿಯ ಖಾಯಂ ವಾಸದ ದೃಢೀಕರಣಕ್ಕೆ ಆಧಾರ ಕಾರ್ಡ್/ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿಯ ದೃಢೀಕೃತ ಪ್ರತಿ ಅಥವಾ ಗ್ರಾಮ ಲೆಕ್ಕಾಧಿಕಾರಿಯಿಂದ ನೀಡಿರುವ ವಾಸಸ್ಥಳದ ದೃಢೀಕರಣ ಪತ್ರ ಲಗತ್ತಿಸಬೇಕು.
4. ವಿದ್ಯಾರ್ಥಿಯು ವ್ಯಾಸಂಗದ ಉದ್ದೇಶಕ್ಕೆ ಸೇವಾವಲಯದ ವ್ಯಾಪ್ತಿಯಲ್ಲಿ ಬರುವ ಇತರೆ ಹಣಕಾಸು ಸಂಸ್ಥೆಗಳು/ಬ್ಯಾಂಕ್‌ಗಳಿಂದ ಸಾಲದ ನೆರವು ಪಡೆಯದೆ ಇರುವ ಬಗ್ಗೆ ಬೇಬಾಕಿ ಪತ್ರ ನೀಡಬೇಕು. ಆಯ್ಕೆಯಾದ ನಂತರ ನೀಡುವುದು.
5. ವಿದ್ಯಾರ್ಥಿಯು ಈ ಸಾಲ ಪಡೆಯುವ ಬಗ್ಗೆ ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರು/ಜಾಮೀನುದಾರರ ಒಪ್ಪಿಗೆ ಪತ್ರ ಮತ್ತು ಅವರುಗಳ ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿ ನಮೂನೆಗೆ ಅಂಟಿಸಬೇಕು.
6. ವಿದ್ಯಾರ್ಥಿಯ ವಯಸ್ಸಿನ ದೃಢೀಕರಣಕ್ಕೆ ಎಸ್.ಎಸ್.ಎಲ್.ಸಿ. ಮಾರ್ಕ್ಸ್‌ಕಾರ್ಡ್ ಅಥವಾ ಟಿಸಿಯ ದೃಢೀಕೃತ ದಾಖಲಾತಿಯನ್ನು ಒದಗಿಸಬೇಕು.
7. ವಿದ್ಯಾರ್ಥಿಯ ಪಾಸ್ ಪೋರ್ಟ್ ಸೈಜ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು.
8. ಕಳೆದ ಸಾಲಿನ ಶೈಕ್ಷಣಿಕ ಕೋರ್ಸ್‌ಗಳಲ್ಲಿ ಪಾಸಾಗಿರುವ ಬಗ್ಗೆ ಅಂಕಪಟ್ಟಿಗಳ ದೃಢೀಕರಣ ಪ್ರತಿಗಳು.
9. ವಿದ್ಯಾರ್ಥಿಯು ವೃತ್ತಿಪರ ಕೋರ್ಸ್‌ಗಳಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಸಿಇಟಿಯ ಪ್ರವೇಶ ಪತ್ರ/ಸಂಬಂಧಿಸಿದ ಪ್ರಾಧಿಕಾರವು ನಡೆಸಿದ ಪ್ರವೇಶ ಪರೀಕ್ಷೆಯ ಮೂಲಕ ಕಾಲೇಜುಗಳಿಗೆ ಪ್ರವೇಶ ಪತ್ರ ಪಡೆದಿರುವ ಬಗ್ಗೆ ಸದರಿ ಸರ್ಟಿಫಿಕೇಟ್ ಪ್ರತಿಯನ್ನು ಲಗತ್ತಿಸಬೇಕು.
10. ಸಿಇಟಿ ಅಥವಾ ಸಂಬಂಧಿಸಿದ ಪ್ರಾಧಿಕಾರದಿಂದ ಆಯ್ಕೆಯಾದ ನಂತರ ಕಾಲೇಜು ಪ್ರವೇಶ ಪಡೆದ ಬಗ್ಗೆ ಪ್ರಾಂಶುಪಾಲರಿಂದ ನೀಡಲ್ಪಟ್ಟ Admission Certificate/Study Certificate ದೃಢೀಕರಣ ಪತ್ರ.
11. ವಾರ್ಷಿಕ ಖರ್ಚು ವೆಚ್ಚದ ಬಗ್ಗೆ ಕಾಲೇಜು ಮುಖ್ಯಸ್ಥರಿಂದ ಫೀ ಸ್ಟ್ರಕ್ಚರ್ ಸರ್ಟಿಫಿಕೇಟ್. ವಿದ್ಯಾರ್ಥಿ ನಿಲಯದಲ್ಲಿ (ಹಾಸ್ಟೆಲ್) ವಾಸ್ತವ್ಯವಿದ್ದಲ್ಲಿ ಆ ಹಾಸ್ಟೆಲ್ ವಾರ್ಡನ್/ಮ್ಯಾನೇಜರ್ ರವರಿಂದ ವಾರ್ಷಿಕ ಅಂದಾಜು ವೆಚ್ಚದ ಪತ್ರ.
12. ವಿದ್ಯಾರ್ಥಿಯು ವ್ಯಾಸಂಗದ ಪೂರ್ಣ ಅವಧಿಗೆ ಪಡೆಯುವ ಸಾಲದ ಮೊತ್ತಕ್ಕೆ ಮರುಪಾವತಿ ಭದ್ರತೆಗಾಗಿ ವಿದ್ಯಾರ್ಥಿ ಮತ್ತು ತಂದೆ/ಪೋಷಕರು ರೂ.200/-ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ (Indemnity Bond) ಬರೆದು ಕೊಡುವುದು ಹಾಗೂ ಜಾಮೀನು ನೀಡುವ ವ್ಯಕ್ತಿಯಿಂದ Surety's Affidavit ರೂ.100/-ಗಳ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರೆದು ಕೊಡುವುದು. ವಿದ್ಯಾರ್ಥಿಯ ತಂದೆ ಮತ್ತು ಜಾಮೀನುದಾರರ ಆಸ್ತಿ ಮತ್ತು ಋಣಭಾರದ ಘೋಷಣೆ ಸಲ್ಲಿಸುವುದು.

V. ಆಯ್ಕೆಯ ವಿಧಾನ:-

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಪ್ರತಿ ವರ್ಷ ಕಾಲೇಜುಗಳು ಪ್ರಾರಂಭವಾದ ನಂತರ ಆರ್ಥಿಕ ನೆರವು ಒದಗಿಸುವ ಬಗ್ಗೆ ಸ್ಥಳೀಯ ಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸುವುದು. ಹಾಗೂ ಪತ್ರಿಕಾ ಪ್ರಕಟಣೆಯನ್ನು ಆಯಾ ಜಿಲ್ಲೆಯಲ್ಲಿರುವ ಕಾಲೇಜಿಗಳ ನೋಟೀಸ್ ಬೋರ್ಡ್‌ಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳುವುದು. ಪ್ರಕಟಣೆ ಮೇರೆಗೆ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ಸಂಬಂಧಿಸಿದ ಕೋರ್ಸಿನ ಪೂರ್ಣಾವಧಿಗೆ ಅಗತ್ಯವಿರುವ ಒಟ್ಟು ಸಾಲದ ಮೊತ್ತಕ್ಕೆ ಒಂದೇ ಬಾರಿಗೆ ಸಾಲದ ಮಂಜೂರಾತಿಯನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ/ಮಂಜೂರಾತಿ ಪಡೆಯುವುದು. ಆಯ್ಕೆಯಾದ ಅರ್ಹ ವಿದ್ಯಾರ್ಥಿಗಳ ಎಲ್ಲಾ ದಾಖಲಾತಿಗಳೊಂದಿಗೆ ಅರ್ಜಿಯನ್ನು ಪ್ರಸ್ತಾವನೆ ಸಹಿತ ನಿಗಮಕ್ಕೆ ಸಾಲ ಬಿಡುಗಡೆಗೆ ಆಯ್ಕೆ ಸಮಿತಿಯು ಕಳುಹಿಸಿ ಕೊಡುತ್ತದೆ. ನಿಗಮದ ಕೇಂದ್ರ/ವಿಭಾಗ ವ್ಯವಸ್ಥಾಪಕರ ಕಛೇರಿಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸಾಲ ಮಂಜೂರಾತಿಗೆ ಕ್ರಮ ವಹಿಸುತ್ತದೆ.

VI. ಮೀಸಲಾತಿ ಅನುಪಾತ:-

ಈ ಯೋಜನೆಯಲ್ಲಿ ಪ್ರವರ್ಗ 1ಕ್ಕೆ ಶೇ.14 ಮತ್ತು ಪ್ರವರ್ಗ 2ಎ ಗೆ ಶೇ.54 ಪ್ರವರ್ಗ 3ಎಗೆ ಶೇ.14, 3ಬಿ ಗೆ ಶೇ.18ರ ಮೀಸಲಾತಿ ಅನುಪಾತದ ಅನ್ವಯ ಆಯ್ಕೆ ಮಾಡಿ ಸೌಲಭ್ಯ ನೀಡುವುದು. ಆಯಾ ಪ್ರವರ್ಗಕ್ಕೆ ಮೀಸಲಾತಿ ಅನುಪಾತದನ್ವಯ ನಿಗದಿತ ಅರ್ಜಿಗಳು ಬಾರದಿದ್ದಲ್ಲಿ ಆಯ್ಕೆ ಸಮಿತಿಯು ಪರಿಶೀಲಿಸಿ ಸ್ವೀಕೃತ ಅರ್ಜಿಗಳಲ್ಲಿ ಒಟ್ಟಾರೆ ಪ್ರವರ್ಗ-1 ಮತ್ತು 2ಎಗೆ ಶೇ.70 ರಷ್ಟು ಹಾಗೂ ಪ್ರವರ್ಗ-3ಎ ಮತ್ತು 3ಬಿಗೆ ಶೇ.30ರಷ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪರಿಗಣಿಸುವುದು. ಈ ಬಗ್ಗೆ ಆಯ್ಕೆ ಸಮಿತಿಯ ಸಭಾ ನಡವಳಿಯಲ್ಲಿ ದಾಖಲಿಸುವುದು.

VII. ಸಾಲ ವಿತರಿಸುವಿಕೆ:-

ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಆಯ್ಕೆ ಮಾಡಿ ಶಿಫಾರಸ್ಸು ಮಾಡಿರುವ ಪ್ರಸ್ತಾವನೆ ಮತ್ತು ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ನಿಗಮವು ಪ್ರಥಮ ಹಂತದಲ್ಲಿ 1ನೇ ಕಂತಿನ ಸಾಲವನ್ನು ಮಂಜೂರು ಮಾಡಿ ಮಂಜೂರು ಮಾಡಿದ ಸಾಲದ ಮೊತ್ತಕ್ಕೆ ವಿದ್ಯಾರ್ಥಿಯ ಹೆಸರಿನಲ್ಲಿ ಚೆಕ್ ಮೂಲಕ ಹಣವನ್ನು ಬಿಡುಗಡೆ ಮಾಡಿ ಮಂಜೂರಾತಿ ಪತ್ರದೊಂದಿಗೆ ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತದೆ. ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಯವರು ನಿಗಮವು ಸಿದ್ಧಪಡಿಸಿದ ದಸ್ತಾವೇಜುಗಳ ಕೈಪಿಡಿಯಲ್ಲಿ ಸೂಚಿಸಿದ ನಮೂನೆಗಳಲ್ಲಿ ಸಾಲದ ಭದ್ರತಾ ದಾಖಲಾತಿಗಳಿಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಯ ತಂದೆ, ತಾಯಿ/ಪೋಷಕರು/ಜಾಮೀನುದಾರರಿಂದ ಸಹಿ ಪಡೆದು ಸಾಲದ ಮೊತ್ತದ ಚೆಕ್‌ನ್ನು ವಿದ್ಯಾರ್ಥಿಗಳಿಗೆ ವಿತರಿಸಲು ಕ್ರಮವಹಿಸುತ್ತಾರೆ. ವಿದ್ಯಾರ್ಥಿಗೆ ನಿಗಮದಿಂದ ಸಾಲ ಮಂಜೂರಾಗಿರುವ ಬಗ್ಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಗಮನಕ್ಕೆ ತರಲಾಗುತ್ತದೆ.

ಎರಡನೇ ಮತ್ತು ನಂತರದ ಕಂತಿನ ಸಾಲ ಬಿಡುಗಡೆ ಮಾಡಲು ಸಾಲ ಪಡೆದ ವಿದ್ಯಾರ್ಥಿಯು ಆಯಾ ವರ್ಷ ನಿಗದಿಪಡಿಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಮುಂದಿನ ಸೆಮಿಸ್ಟರ್‌ಗಳಲ್ಲಿ ವ್ಯಾಸಂಗ ಮಾಡಲು ಅರ್ಹತೆ ಪಡೆದಿರಬೇಕು.

1. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಯು 2/3/4/5ನೇ ಸೆಮಿಸ್ಟರ್‌ನಲ್ಲಿ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರುವ ಬಗ್ಗೆ ಪ್ರಾಂಶುಪಾಲರಿಂದ ನೀಡಲ್ಪಟ್ಟ ಸ್ಟಡಿ ಸರ್ಟಿಫಿಕೇಟ್/ವ್ಯಾಸಂಗ ದೃಢೀಕರಣ ಪತ್ರ.
2. ವಿದ್ಯಾರ್ಥಿಯು ಹಿಂದಿನ ವರ್ಷಗಳ ಸೆಮಿಸ್ಟರ್‌ಗಳಲ್ಲಿ ತೇರ್ಗಡೆಯಾಗಿರುವ ಬಗ್ಗೆ ಅಂಕಪಟ್ಟಿ (ದೃಢೀಕೃತ ನಕಲು)
3. ಇಂಜಿನಿಯರಿಂಗ್ ಕೋರ್ಸ್‌ಗಳಿಗೆ 1ನೇ ಸೆಮಿಸ್ಟರ್, 3ನೇ ಸೆಮಿಸ್ಟರ್, 5ನೇ ಸೆಮಿಸ್ಟರ್ ಮತ್ತು 7ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ಪಡೆದಿದ್ದಲ್ಲಿ ಕ್ರಮವಾಗಿ 1, 2, 3 ಮತ್ತು 4ನೇ ವರ್ಷಗಳಿಗೆ ಸಾಲ ಮಂಜೂರು ಮಾಡಬೇಕು.
4. ನಂತರದ ಕಂತಿನ ಸಾಲ ಬಿಡುಗಡೆ ಮಾಡುವ ಬಗ್ಗೆ ವಿದ್ಯಾರ್ಥಿಯ ತಂದೆ/ತಾಯಿ/ಪೋಷಕರ ಅಥವಾ ಜಾಮೀನುದಾರರಿಂದ ಒಪ್ಪಿಗೆ ಪತ್ರ.
5. ಹಿಂದಿನ ವರ್ಷ ನಿಗಮದಿಂದ ಬಿಡುಗಡೆಯಾದ ಸಾಲದ ಕಂತನ್ನು ವಿದ್ಯಾರ್ಥಿಗೆ ವಿತರಣೆ ಮಾಡಿರುವ ಬಗ್ಗೆ ಹಣ ಸಂದಾಯ ರಶೀದಿ.(ಜಿಲ್ಲಾ ವ್ಯವಸ್ಥಾಪಕರು ನೀಡಬೇಕು).
6. 2/3/4/5ನೇ ಕಂತುಗಳ ಸಾಲ ಬಿಡುಗಡೆಗೆ ಕ್ರಮವಾಗಿ 1/2/3/4ನೇ ಕಂತುಗಳ ಸಾಲಕ್ಕೆ ನಿಗದಿತ ಭದ್ರತಾ ದಾಖಲಾತಿಗಳನ್ನು ಪಡೆದುಕೊಂಡು ಸುಸ್ಥಿತಿಯಲ್ಲಿಟ್ಟಿರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ದೃಢೀಕರಣ ನೀಡಬೇಕು.

ಜಿಲ್ಲಾ ವ್ಯವಸ್ಥಾಪಕರು ವಿದ್ಯಾರ್ಥಿಯು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ವಿದ್ಯಾರ್ಥಿಯು ಮುಂದಿನ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಬಗ್ಗೆ ಖಚಿತಪಡಿಸಿಕೊಂಡು ಮೇಲ್ಕಂಡ ದಾಖಲಾತಿಗಳೊಂದಿಗೆ ನಂತರದ ಕಂತಿನ ಸಾಲವನ್ನು ಬಿಡುಗಡೆ ಮಾಡಲು ಕೋರಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಇದಕ್ಕೆ ಮನಃ ಜಿಲ್ಲಾ ಸಮಿತಿಯ ಅನುಮೋದನೆ ಪಡೆಯಬೇಕಾಗಿರುವುದಿಲ್ಲ. ಮೊದಲನೆ ಭಾರಿಗೆ ಎಲ್ಲಾ ವರ್ಷಗಳಿಗೆ ಬೇಕಾಗುವ ಒಟ್ಟು ಸಾಲದ ಮೊತ್ತಕ್ಕೆ ಜಿಲ್ಲಾ ಸಮಿತಿಯಿಂದ ಅನುಮೋದನೆ ಪಡೆಯುವುದು.

VIII. ಸಾಲದ ಭದ್ರತಾ ದಾಖಲಾತಿಗಳು:-

ನಿಗಮವು ಮಂಜೂರು ಮಾಡುವ ಒಟ್ಟು ಸಾಲದ ಮೊತ್ತಕ್ಕೆ ವಿದ್ಯಾರ್ಥಿ ಹಾಗೂ ಜಾಮೀನುದಾರರಿಂದ ಈ ಕೆಳಕಂಡ ಭದ್ರತಾ ದಾಖಲಾತಿಗಳಿಗೆ ಸಹಿ ಪಡೆಯಬೇಕು.

| | | | |
|---|---|---|---|
| 1. | ಪ್ರಾಮಿಸರಿ ನೋಟ್ | ಅನುಬಂಧ-1 | |
| 2. | ಡಿ.ಪಿ. ನೋಟ್ ಡೆಲಿವರಿ ಲೆಟರ್ | ಅನುಬಂಧ-2 | (ವಿದ್ಯಾರ್ಥಿಯಿಂದ) |
| 3. | ಪ್ರತಿಫಲ ರಶೀದಿ (Consideration Receipt) | ಅನುಬಂಧ-4 | |
| 4. | ಮರುಪಾವತಿ ಪತ್ರ (Letter of Repayment) | ಅನುಬಂಧ-3 | |
| 5. | ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್ | ಅನುಬಂಧ-5 | |
| 6. | ಲೆಟರ್ ಆಫ್ ಗ್ಯಾರೆಂಟಿ | ಅನುಬಂಧ-6 | (ಜಾಮೀನುದಾರರಿಂದ) |
| 7. | Indemnity Bond | | (ವಿದ್ಯಾರ್ಥಿ/ತಂದೆ/ಪೋಷಕರು) |
| 8 | Surety's Affidavit | | (ಜಾಮೀನುದಾರರಿಂದ) |

IX. ಬಡ್ಡಿಯ ದರ:-

ಸಾಲದ ಮೊತ್ತಕ್ಕೆ ವಾರ್ಷಿಕವಾಗಿ ಶೇ.2ರ ಬಡ್ಡಿಯನ್ನು ವಿಧಿಸಲಾಗುವುದು. ಹಂತ ಹಂತವಾಗಿ ಸಾಲ ಬಿಡುಗಡೆ ಮಾಡುವುದರಿಂದ ಬಿಡುಗಡೆಯಾದ ಮೊತ್ತಕ್ಕೆ ಮಾತ್ರ ಬಡ್ಡಿ ವಿಧಿಸಲಾಗುವುದು. ಸುಸ್ಥಿಯಾದ ಸಾಲಕ್ಕೆ ಶೇ.2ರ ಸುಸ್ಥಿ ಬಡ್ಡಿಯನ್ನು ವಿಧಿಸಲಾಗುತ್ತದೆ.

X. ಮರುಪಾವತಿಯ ಅವಧಿ:-

ವಿದ್ಯಾರ್ಥಿಯು ಕೋರ್ಸ್ ಪೂರ್ಣಗೊಂಡ 4ನೇ ತಿಂಗಳಿಂದ ಮರುಪಾವತಿಯ ಕಂತುಗಳು ತಾನಾಯೇ ಪ್ರಾರಂಭವಾಗುತ್ತವೆ. ಮರುಪಾವತಿಯ ಅವಧಿ 3 ವರ್ಷಗಳು. ಪ್ರತಿ ತಿಂಗಳು ಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಮತ್ತು ಸರಾಸರಿ ಬಡ್ಡಿಯನ್ನು ಸೇರಿಸಿ ಮರುಪಾವತಿ ಕಂತನ್ನು ನಿಗದಿಪಡಿಸಲಾಗುವುದು.

ವಿದ್ಯಾರ್ಥಿಯು ಸಾಲ ಪಡೆದು ವ್ಯಾಸಂಗವನ್ನು ಅವಧಿ ಮಧ್ಯದಲ್ಲಿಯೇ ನಿಲ್ಲಿಸಿದರೆ, ಅಥವಾ ಅನುತ್ತೀರ್ಣರಾಗಿ ವ್ಯಾಸಂಗ ಬಿಟ್ಟರೆ ಅಲ್ಲಿಯವರೆಗೆ ನಿಗಮದಿಂದ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲದ ಕಂತುಗಳ ಒಟ್ಟು ಮೊತ್ತವನ್ನು ಶೇ4%ರ ಬಡ್ಡಿಯೊಂದಿಗೆ ನಾಲ್ಕು ಕಂತುಗಳಲ್ಲಿ, ಎರಡು ವರ್ಷಗಳಲ್ಲಿ ವಸೂಲಿ ಮಾಡುವುದು.

XI. ಯೋಜನೆಯ ಮೌಲ್ಯೀಕರಣ:-

ವಿದ್ಯಾರ್ಥಿಯು ಈ ಯೋಜನೆಯಲ್ಲಿ ಸಾಲ ಪಡೆದು ವಿದ್ಯಾಭ್ಯಾಸ ಮುಗಿಸಿದ ನಂತರ ಮತ್ತು ಉದ್ಯೋಗ ದೊರೆತ ನಂತರ ವಿದ್ಯಾರ್ಥಿಯು ಉದ್ಯೋಗದಲ್ಲಿರುವ ಇಲಾಖೆ, ಹುದ್ದೆ ಹಾಗೂ ಪಡೆಯುತ್ತಿರುವ ವೇತನ ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಛೇರಿಯ ವಿವರಗಳನ್ನು ಅಥವಾ ಸ್ವಯಂ ಉದ್ಯೋಗ ಕೈಗೊಂಡಿರುವುದರ ಬಗ್ಗೆ ವಿವರಗಳನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಎರಡು ತಿಂಗಳಲ್ಲಿ ನೀಡಬೇಕು.

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

[illegible]

| ಕ್ರ. ಸಂ. | ಕೋರ್ಸಿನ ಹೆಸರು |
|---|---|
| 1 | ಬಿ.ಇ.(ಸಿ.ಇ.ಟಿ) |
| 2 | ಎಂ.ಬಿ.ಬಿ.ಎಸ್. |
| 3 | ಬಿ.ಯು.ಎಂ.ಎಸ್.(ಸಿ.ಇ.ಟಿ) (Bachclor of Unani Medicine and Surgery) |
| 4 | ಬಿ.ಡಿ.ಎಸ್(ಸಿ.ಇ.ಟಿ) |
| 5 | ಬಿ.ಎ.ಎಂ.ಎಸ್.(ಸಿ.ಇ.ಟಿ) (Bachclor of Ayurvedic Medicine and Surgery) |
| 6 | ಬಿ.ಎಚ್.ಎಂ.ಎಸ್(ಸಿ.ಇ.ಟಿ.) (Bachelor of Homeopathic Medicine and Surgery) |
| 7 | ಎಂ.ಬಿ.ಎ.(ಸಿ.ಇ.ಟಿ) |
| 8 | ಎಂ.ಟೆಕ್(ಸಿ.ಇ.ಟಿ) |
| 9 | ಎಂ.ಇ. (Master of Engineering)) |
| 10 | ಎಂ.ಡಿ. Doctor of Medicine |
| 11 | ಪಿ.ಹೆಚ್.ಡಿ. |
| 12 | ಬಿ.ಸಿ.ಎ/ಎಂ.ಸಿ.ಎ. |
| 13 | ಎಂ.ಎಸ್.ಅಗ್ರಿಕಲ್ಚರ್ |
| 14 | ಬಿ.ಎಸ್.ಸಿ. ನರ್ಸಿಂಗ್ |
| 15 | ಬಿ.ಫಾರಂ./ಎಂ.ಫಾರಂ |
| 16 | ಬಿ.ಎಸ್.ಸಿ. ಪ್ಯಾರಾ ಮೆಡಿಕಲ್ |
| 17 | ಬಿ.ಎಸ್.ಸಿ. ಬಯೋ ಟೆಕ್ನಾಲಜಿ |
| 18 | ಬಿ.ಟೆಕ್ |
| 19 | ಬಿ.ಪಿ.ಟಿ (Bachelor of Physio Therapy) |
| 20 | ಬಿ.ವಿ.ಎಸ್.ಸಿ/ಎಂ.ವಿ.ಎಸ್.ಸಿ. (Bachelor of Veterinary Science/Master of Veterinary Science) |
| 21 | ಜಿ.ಎನ್.ಎಂ. (General Nursing and Midwifery Course) |
| 22 | ಬಿ.ಹೆಚ್.ಎಮ್. (Bachelor Degree in Hotel Management) |
| 23 | ಎಂ.ಡಿ.ಎಸ್. (Master of Dental Surgery) |
| 24 | ಎಂ.ಎಸ್.ಡಬ್ಲ್ಯೂ (Master of Social Work) |
| 25 | ಎಲ್.ಎಲ್.ಎಂ. |
| 26 | ಎಂ.ಎಫ್.ಎ. (Master of Finance and Accounting) |
| 27 | ಎಂ.ಎಸ್.ಸಿ. ಬಯೋ ಟೆಕ್ನಾಲಜಿ |
| 28 | ಎಂ.ಎಸ್.ಸಿ. ಐಟಿ |

(ಚಂದ್ರ[illegible])

[illegible]